ಶ್ರೀ ಎಂ. ವೀರಪ್ಪ ಮೊಯಿಲಿ: ಯಡಿಯೂರಪ್ಪನವರೆ ಇತ್ತೀಚೆಗೆ ನಡೆದ ಗ್ರಾಮ ಪಂಚಾಯತಿ ಚುನಾವಣೆ ಫಲಿತಾಂಶದಲ್ಲಿ ಶೇಕಡ 31ರಷ್ಟಿದ್ದ ನಿಮ್ಮ ಪಕ್ಷದ (ಬಿ.ಜೆ.ಪಿ) ಬಲ ಶೇಕಡ 9ಕ್ಕೆ ಕುಸಿದಿದೆ.

(ಈ ಸಂದರ್ಭದಲ್ಲಿ ಆಡಳಿತ ಪಕ್ಷದ ಎಲ್ಲಾ ಸದಸ್ಯರುಗಳು ಮೇಜು ಕುಟ್ಟಿ ಸಂತೋಷ ವ್ಯಕ್ತಪಡಿಸಿದರು)

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಎಲ್ಲಾ ಸದಸ್ಯರುಗಳನ್ನು ಹೊರಕ್ಕೆ ಹಾಕಿ, ಈ ಸದನದಲ್ಲಿ ಕಾಂಗ್ರೆಸ್ ಪಕ್ಷದ ಕಾರ್ಯಾಲಯವಾಗಿ ಮಾಡಬೇಡಿ. ಇವೊತ್ತಿನ ದಿವಸ ಪ್ರಜಾಪ್ರಭುತ್ವದ ಕೊಲೆಯಾಗಿದೆ.

(ಈ ಹಂತದಲ್ಲಿ ಸದಸ್ಯರಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಸಭಾಧ್ಯಕ್ಷರ ಪೀಠದ ಮುಂದೆ ನಿಂತು "ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯತಿ ಚುನಾವಣೆಯನ್ನು ಮುಂದೂಡಿರುವಂತಾದ್ದು ಅತ್ಯಂತ ಅಪರಾಧವಾಗಿದ್ದು, ಇದು ಸರಿಯಲ್ಲ, ನೀವು ಸರ್ವಾಧಿಕಾರಿಯೇ? ಇವೊತ್ತು ಚುನಾವಣೆ ನಡೆಸುವುದಕ್ಕಾಗದೆ, ಲಾ ಅಂಡ್ ಆರ್ಡರ್ ಸಿಚ್ಯುಯೇಷನ್ ಸರಿ ಮಾಡುವುದಕ್ಕಾಗದೆ ಹೇಗೆ ನೀವು ಅಧಿಕಾರದಲ್ಲಿ ಮುಂದುವರೆಯುತ್ತೀರಿ, ಇದನ್ನು ಪ್ರತಿಭಟಿಸಿ ನಾನು ಧರಣಿ ಮಾಡುತ್ತೇನೆ" ಎಂದು ಸದನದ ಬಾವಿಯಲ್ಲಿ ಧರಣಿ ಕುಳಿತರು)

ಶ್ರೀ ವಾಟಾಳ್ ನಾಗರಾಜ್: ತಮ್ಮ ಪ್ರಶ್ನೋತ್ತರಕ್ಕೆ ಬೆಂಕಿ ಹಚ್ಚಿ, ಯಾವ ಪ್ರಶ್ನೋತ್ತರ ಇದು? ಇದು ಸರಿಯಲ್ಲ, ಸರಿಯಾದ ನೀತಿಯಲ್ಲ.

(ಈ ಸಂದರ್ಭದಲ್ಲಿ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಪ್ರಶ್ನೋತ್ತರ ಪಟ್ಟಿಯನ್ನು ಸದನದಲ್ಲಿ ಹರಿದು ಬಿಸಾಡಿದರು)

(ಮಾನ್ಯ ಸದಸ್ಯರಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಸದನದ ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು)

ಅಧ್ಯಕ್ಷರು: ಯಡಿಯೂರಪ್ಪನವರೆ, ತಾವು ಪದೇ ಪದೇ ಸದನದ ಕಾರ್ಯಕಲಾಪಗಳಿಗೆ ಅಡ್ಡಿಯುಂಟು ಮಾಡುತ್ತಿರುವುದರಿಂದ ನಿಮ್ಮನ್ನು ಇವೊತ್ತು ಸದನದಿಂದ ಸಸ್ಪೆಂಡ್ ಮಾಡಲಾಗಿದೆ.

(ಸದಸ್ಯರಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಪ್ರತಿಭಟಿಸುತ್ತಾ ಸದನದಿಂದ ಹೊರ ನಡೆದರು)

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ನಾನು ತಮ್ಮನ್ನು ವಿನಯದಿಂದ ಕೈಮುಗಿದು ಪ್ರಾರ್ಥಿಸಿಕೊಳ್ಳುತ್ತಿದ್ದೇನೆ. ಈ ಪರಿಸ್ಥಿತಿಯನ್ನು ನಿನ್ನೆ ನೋಡಿದ್ದು ಆಯಿತು, ಇಂದೂ ನೋಡಿದ್ದಾಯಿತು.

ಅಧ್ಯಕ್ಷರು: ಈಗ ಏನೂ ರಿಕಾರ್ಡ್ಗೆ ಹೋಗುವುದಿಲ್ಲ ಯಾವುದನ್ನೂ ರಿಕಾರ್ಡ್ ಮಾಡಬಾರದು.

ಶ್ರೀ ವಾಟಾಳ್ ನಾಗರಾಜ್: ಈ ಸದನ ನಡೆಯುವಾಗ.....

ಅಧ್ಯಕ್ಷರು: ಇದು ಅತಿಶಯೋಕ್ತಿ ಆಗುತ್ತದೆ. ನಾನು ಅವಕಾಶ ಕೊಡುತ್ತೇನೆಂದು ಹೇಳಿದ್ದೇನೆ. ಇದೇ ರೀತಿ ಆಗಬೇಕು ಎಂದು ಹಠ ಮಾಡಿದರೆ ಆಗುವುದಿಲ್ಲ. ಪ್ರಶ್ನೋತ್ತರ ಮುಗಿಯಲಿ ಅವಕಾಶ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ತಾವು ಈ ಸದನವನ್ನು ಕಾಪಾಡುವಂತಹವರು. ಆದರೆ ಎಲ್ಲಾ ಸದಸ್ಯರನ್ನು ಹೊರ ಹಾಕಿ ಈ ಸದನ ನಡೆಸುವುದು ಉಚಿತವೇ?